ದಿನಾಂಕ 08-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ಹಾಗೂ 2 ನೇ ಪ್ರತಿವಾದಿಯರ ಪರ ಶ್ರೀ ಡಿ.ಎಸ್., ವಕೀಲರಿಂದಃ**

ನಾನು 1 ನೇ ಹಾಗೂ 2 ನೇ ಪ್ರತಿವಾದಿ ಸಲ್ಲಿಸಿದ ಉದಾಹರಣೆಯನ್ನು ಓದಿ ನೋಡಿರುತ್ತೇನೆ. ಸದರಿ ಉದಾಹರಣೆಯ ಖಂಡಿಕೆ 14 ರಿಂದ 28, 28 ಎ ಯಿಂದ 30 ರಲ್ಲಿ ಬರೆದಿರುವ ಸಂಗತಿಗಳನ್ನು ನಾನು ಒಪ್ಪುತ್ತೇನೆ.

2. ನಿಪಿ.2 ಹಾಗೂ 5 ವಿಭಾಗ ಪತ್ರಗಳಲ್ಲ, ಬದಲಿಗೆ ಅದು ತಾತ್ಕಾಲಿಕ ವ್ಯವಸ್ಥೆಯಾಗಿತ್ತು ಎಂದರೆ ಸರಿ. ಸಾಕ್ಷಿದಾರರಿಗೆ ಸದರಿ ಪ್ರಶ್ನೆಯನ್ನು ಎರಡು ಬಾರಿ ಅರ್ಥೈಸಿ ಕೇಳಲಾಗಿರುತ್ತದೆ. ನಿಪಿ.5 ಕ್ಕೆ ಜಲಜಾಕ್ಷಿಯವರ ಕವರಿನವರು ಪಕ್ಷಗಾರರಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು, ಕೃಷ್ಣಮ್ಮ ಹೆಗ್ಗಡ್ತಿಯವರ ಪಾಲಿನವರು ಮಾತ್ರ ಸದರಿ ದಾಖಲಾತಿಯಲ್ಲಿ ಪಕ್ಷಗಾರರಿದ್ದರು ಎನ್ನುತ್ತಾರೆ. ನಿಪಿ.5 ದುರ್ಗಾಲಕ್ಷ್ಮೀ ಹೆಗ್ಗಡ್ತಿಯವರ ಅಳಿಯ ಸಂತಾನ ಕವರಿಗೆ ಬಂಧನಕಾರವಾಗಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ನಿಪಿ.2 ಹಾಗೂ 5 ರ ಬಗ್ಗೆ ನಮೂದಿಸಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

3. ದಾವಾ ಆಸ್ತಿಗಳಲ್ಲಿ ಕೆಲವು ಭೂ ಸುಧಾರಣಾ ಕಾಯ್ದೆಯಡಿ ನಮ್ಮ ಒಕ್ಕಲುಗಳಿಗೆ ಹೋಗಿರುತ್ತದೆ. ಉಳಿದ ಆಸ್ತಿಗಳು ಯಾರ ಸ್ವಾಧೀನತೆಯಲ್ಲಿ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ದಾವಾ ಆಸ್ತಿಯ ಕಂದಾಯವನ್ನು ಯಾರು ಪಾವತಿ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ.

4. ದುರ್ಗಾಲಕ್ಷ್ಮೀ ಹೆಗ್ಗಡ್ತಿಯವರ ಮಗಳು ಜಲಜಾಕ್ಷಿ ಹೆಗ್ಗಡ್ತಿಗೆ ಗೋವಿಂದರಾಜ್ ಎನ್ನುವ ಮಗ ಹಾಗೂ ಲೀಲಾವತಿ ಎನ್ನುವ ಮಕ್ಕಳು ಇದ್ದರು. ಪ್ರತಿವಾದಿ ನಂ.1 ಮತ್ತು 2 ರವರು ಸದರಿ ಲೀಲಾವತಿಯ ಮಕ್ಕಳು. ಗೋವಿಂದರಾಜ್ ರವರಿಗೆ ಎರಡು ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ ಇರುತ್ತಾನೆ. ಸದರಿ ಗೋವಿಂದರಾಜ್ ಸುಮಾರು 1980 ರ ನಂತರ ಮೃತಪಟ್ಟಿರುತ್ತಾರೆ. ಇಸವಿ ಹೇಳಲು ಬರುವುದಿಲ್ಲ.

5. ದಾವಾ ಆಸ್ತಿಯಲ್ಲಿ ನಿಮ್ಮ ಸ್ವಾಧೀನ ಎಷ್ಟು ಆಸ್ತಿ ಇದೆ ಎಂದರೆ, ನನ್ನ ಸ್ವಾಧೀನ ಯಾವುದೇ ಆಸ್ತಿ ಇಲ್ಲ. ನಿಪಿ.2 ಮತ್ತು 5 ಕರಾರಿನಡಿ ಬಂದ ಆಸ್ತಿಗಳನ್ನು ಕುಸುಮಾವತಿ ಹೆಗ್ಗಡ್ತಿಯ ಕವರಿನವರು ಯಾರಿಗೂ ಮಾರಾಟ ಮಾಡಿರುವುದಿಲ್ಲ. ದಾವಾ ಆಸ್ತಿ ಈಗಲೂ ಕೂಡ ದುರ್ಗಾಲಕ್ಷ್ಮೀ ಹೆಗ್ಗಡ್ತಿಯ ಅಳಿಯ ಸಂತಾನ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ.

6. ದುರ್ಗಾಲಕ್ಷ್ಮೀ ಹೆಗ್ಗಡ್ತಿಗೆ ಇಬ್ಬರು ಗಂಡು ಮಕ್ಕಳು ಅಂದರೆ ಜಗನ್ನಾಥ ಹಾಗೂ ಶಂಕರ ಹೆಗ್ಗಡೆ ಎಂದು ಇದ್ದರು. ಸದರಿ ಶಂಕರ ಹೆಗ್ಗಡೆ ನಾನು ಚಿಕ್ಕವನಿರುವಾಗಲೇ ಮೃತಪಟ್ಟಿರುತ್ತಾರೆ. ಸದರಿ ಶಂಕರ ಹೆಗ್ಗಡೆಯ ಮಗ ಬಿ. ಎಂ. ಹೆಗ್ಗಡೆ ಜೀವಂತ ಇದ್ದಾರೆ. ನಾನು ನನ್ನ ವಾದ ಪತ್ರ ಖಂಡಿಕೆ 5 ಎ ರಡಿ ಕೇಳಿರುವ ನಿವೃತ್ತಿಗೆ ಅರ್ಹನಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಪ್ರತಿವಾದಿ ನಂಬ್ರ.**3** ರವರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. ಪ್ರತಿವಾದಿ **4** ಮತ್ತು **5** ರವರ ಪರ ವಕೀಲರು ಸಮಯಾವಕಾಶ ಕೋರಿದ್ದು, ಅಂತಿಮ ಅವಕಾಶವಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಉಡುಪಿ.